**ಅತ್ಯಂತ ಪ್ರಮುಖವಾದದ್ದು**

**ಇಂದೇ**

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಕಇ 107 ಎಸ್‌ಎಲ್‌ಪಿ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ
ಬೆಂಗಳೂರು ದಿನಾಂಕ:01-12-2008.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ:
1) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

ಮಾನ್ಯರೇ,

ವಿಷಯ:- ಗ್ರಾಮೀಣ ಅಂಬೇಡ್ಕರ್ ಯೋಜನೆ ಅಡಿಯಲ್ಲಿ ಘಟಕ ವೆಚ್ಚವನ್ನು ರೂ.30,000 ದಿಂದ 40,000ಕ್ಕೆ ಹೆಚ್ಚಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:-1)ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಏಕ ಕಡತ ಸಂಖ್ಯೆ:ಸಕನಿ/ವಿಘಾಯೋ-2/ಸಿಆರ್-21/2008-09ನೇ ಕ್ರಮಾಂಕದಲ್ಲಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಂದ ಬಂದ ಪ್ರಸ್ತಾವನೆ.
2)ಪತ್ರ ಸಂಖ್ಯೆ:MD RGRHCL 01 AHS 01 2008 ದಿನಾಂಕ:4-8-2008 ರಾಜೀವ್ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಇವರ ವ್ಯವಸ್ಥಾಪಕ ನಿರ್ದೇಶಕರ ಪತ್ರ.
3)ಸರ್ಕಾರಿ ಆದೇಶ ಸಂಖ್ಯೆ:ವಇ 260 ಹೆಚ್‌ಎಎಸ್ 2007, ದಿನಾಂಕ: 30-7-2008.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2008-09ನೇ ಸಾಲಿನಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಂದ ಗ್ರಾಮೀಣ ಅಂಬೇಡ್ಕರ್ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರ ಅಭಿವೃದ್ಧಿಗಾಗಿ ಮನೆಗಳನ್ನು ನಿರ್ಮಿಸಲು ಪ್ರತಿ ಮನೆಗೆ ಘಟಕ ವೆಚ್ಚ ರೂ.30,000ದಿಂದ ರೂ.40,000ಕ್ಕೆ ಹೆಚ್ಚಿಸಿ ನಿರ್ಮಿಸಿಕೊಡಲು ಆರ್ಥಿಕ ಇಲಾಖೆಯು ತನ್ನ ಹಿಂಬರಹ ಸಂಖ್ಯೆ:FD 629 Exp-3/08 ದಿನಾಂಕ:25-11-2008ರಂದು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಈ ಕುರಿತಂತೆ ಗುರಿಯನ್ನು ನಿಗದಿಪಡಿಸಿಕೊಂಡು ಕಾರ್ಯಕ್ರಮ ಅನುಷ್ಠಾನಗೊಳಿಸಲು ಸದರಿ ನಿಗಮಕ್ಕೆ ತಕ್ಷಣವೇ ತಿಳಿಸಿ ಸೂಕ್ತ ಕ್ರಮ ಜರುಗಿಸಲು ನಿರ್ದೇಶನ ನೀಡುವಂತೆ ಕೋರಲು ನನಗೆ ನಿರ್ದೇಶನವಾಗಿದೆ.

(ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರಿಂದ ಅನುಮೋದಿತ)

ತಮ್ಮ ನಂಬುಗೆಯ,

01/12/08

(ಎ.ಎಂ.ಚಿದಾನಂದಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ-1(ಪ್ರ)
ಸಮಾಜ ಕಲ್ಯಾಣ ಇಲಾಖೆ

ಪ್ರತಿ:
ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು- ರವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ